ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.10/2025

| | | | |
|---|---|---|---|
| ಸಾಕ್ಷಿದಾರರ ಹೆಸರು | ಹರ್ಷವರ್ದನ್ ಹೆಚ್.ಕೆ | ಸಿ.ಡಬ್ಲ್ಯೂ: 14 | ಪಿ.ಡಬ್ಲ್ಯೂ: 7 |
| ತಂದೆಯ ಹೆಸರು | ಕ್ಷೇತ್ರ ಪಾಲೇಗೌಡ | | |
| ವಯಸ್ಸು | 34 ವರ್ಷ | | |
| ಉದ್ಯೋಗ | ಪಿ.ಎಸ್.ಐ ಮೂಡಿಗೆರೆ ಪೊಲೀಸ್ ಠಾಣೆ | | |
| ವಾಸ ಸ್ಥಳ | ಮೂಡಿಗೆರೆ | | |

ದಿನಾಂಕ: 22.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನಾನು ದಿ: 16.06.2023 ರಿಂದ ದಿ: 28.01.2026 ರವರೆಗೆ ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 14.10.2024 ರಂದು ಆರೋಪಿಯ ವಿರುದ್ದ ಠಾಣಾ ಎನ್.ಸಿ. ಸಂಖ್ಯೆ 234/2024 ರಂತೆ ತನಿಖೆಯನ್ನು ಕೈಗೊಳ್ಳಲು ನ್ಯಾಯಾಲಯದ ಅನುಮತಿಯನ್ನು ಕೋರಿ ನ್ಯಾಯಾಲಯಕ್ಕೆ ನಿವೇದನೆಯನ್ನು ಸಲ್ಲಿಸಿರುತ್ತೇನೆ. ನಂತರ ದಿ: 15.10.2024 ರಂದು ಪ್ರಕರಣದ ಪಿರ್ಯಾದಿ ಚಾಸಾ.1 ರವರು ಕೃತ್ಯ ನಡೆದ ಸ್ಥಳದಲ್ಲಿ ಹಾಜರು ಇರುವುದನ್ನು ಖಚಿತಪಡಿಸಿಕೊಂಡು ರಸ್ತೆಯಲ್ಲಿ ಹಾಜರು ಸಿಕ್ಕ ಚಾಸಾ.6 ಮತ್ತು 7 ರವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ ಸದರಿಯವರು ಸಹಕರಿಸುವುದಾಗಿ ತಿಳಿಸಿದ ಮೇರೆಗೆ ನೋಟೀಸು ಜಾರಿ ಮಾಡಿರುತ್ತೇನೆ. ನಂತರ ಚಾಸಾ.1 ನಮ್ಮನ್ನು ಕಣಚೂರು ಗ್ರಾಮದ ವಾಸಿ ಉಮೇಶ್ ಕೆ.ಎನ್ ರವರ ಮನೆಯ ಪಕ್ಕದ ರಸ್ತೆಯ ಖಾಲಿ ಜಾಗವನ್ನು ತೋರಿಸಿ ಇದೇ ಸ್ಥಳದಲ್ಲಿ ತನಗೆ ಸೇರಿದ ಕೆ.ಎ.05/ಎಂ.ಎ.3929 ಮಾರುತಿ 800 ಕಾರನ್ನು ದಿ: 08.10.2024 ರಂದು ನಿಲ್ಲಿಸಿದ್ದೆ ಎಂದು ತಿಳಿಸಿದ್ದು, ಅದೇ ದಿನ ಆರೋಪಿ ಹಳೆಯ ದ್ವೇಷದಿಂದ ಕಾರಿನ ಮುಂಭಾಗದ ಗಾಜಿನ ಮೇಲೆ ಎತ್ತಿ ಹಾಕಿ ಗಾಜನ್ನು

ಹೊಡೆದು ಹಾಕಿದ್ದರು ಎಂದು ತಿಳಿಸಿ ಕಲ್ಲನ್ನು ಹಾಜರು ಪಡಿಸಿದ್ದು, ಸದರಿ ಕಲ್ಲನ್ನು ಅಮಾನತ್ತು ಮಹಜರ್ ಮೂಲಕ ವಶಕ್ಕೆ ಪಡೆದಿರುತ್ತೇನೆ. ಮುಂದುವರೆದು ಹೊಡೆದು ಹೋಗಿದ್ದ ಕಾರಿನ ಗಾಜನ್ನು ಹಾಜರು ಪಡಿಸಿದ್ದು, ಸದರಿ ಹೊಡೆದು ಹೋದ ಕಾರಿನ ಗಾಜನ್ನು ವಶಕ್ಕೆ ಪಡೆದಿರುತ್ತೇನೆ. ಸದರಿ ಸ್ಥಳದಲ್ಲಿ ಕೆ.ಎ.05/ಎಂ.ಎ.3929 ಕಾರನ್ನು ಚಾಸಾ.1 ಹಾಜರು ಪಡಿಸಿದ್ದು ಅದನ್ನು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಮಹಜರ್ ಅನ್ನು ಮಧ್ಯಾಹ್ನ 1.00 ರಿಂದ 2.00 ರವರೆಗೆ ಜರುಗಿಸಿರುತ್ತೇನೆ. ಮಹಜರ್ ಕಾಲದಲ್ಲಿ ಛಾಯಚಿತ್ರಗಳನ್ನು ಮತ್ತು ವಿಡಿಯೋವನ್ನು ಚಾಸಾ.10 ರವರ ಮೂಲಕ ಮಾಡಿಸಿರುತ್ತೇನೆ. ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ. ಮಹಜರ್ ಕಾಲದಲ್ಲಿ ವಶಕ್ಕೆ ಪಡೆದ ಮುದ್ದೆ ಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 24/2024 ರಂತೆ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ.10 ರವರಿಂದ ವಿಡಿಯೋ ಮತ್ತು ಛಾಯಚಿತ್ರಗಳಿಗೆ ಸಂಬಂಧಿಸಿದಂತೆ ಭಾರತೀಯ ಸಾಕ್ಷಿ ಅಧಿನಿಯಮದ ಕಲಂ 65(ಬಿ) ರಡಿಯಲ್ಲಿ ಸಲ್ಲಿಸಿದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ.

3. ಅದೇ ದಿನ ಚಾಸಾ.1 ರವರ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತೇನೆ. ಸಾಕ್ಷಿದಾರರಾದ ಚಾಸಾ.2 ರಿಂದ ಚಾಸಾ.5 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ.1 ರವರು ತಮ್ಮ ವಾಹನದ ದಾಖಲೆಗಳನ್ನು ಹಾಜರು ಪಡಿಸಿದ್ದು, ದಾಖಲೆಗಳನ್ನು ಪರಿಶೀಲಿಸಿ ಚಾಸಾ.1 ರವರಿಂದ ಸೂಕ್ತ Indemnity bond ಅನ್ನು ಪಡೆದು ವಾಹನವನ್ನು ಅವರ ವಶಕ್ಕೆ ನೀಡಿರುತ್ತೇನೆ. ನಂತರ ದಿಃ 16.10.2024 ರಂದು ಕೆ.ಎ.05/ಎಂ.ಎ.3929 ಕಾರಿನ ಗ್ಲಾಸ್ ನ ಮುಂಭಾಗದ ಮೌಲ್ಯವನ್ನು ತಿಳಿಸುವಂತೆ ಆರ್ ಟಿ.ಓ ಅಧಿಕಾರಿ ಚಾಸಾ.8 ರವರಿಗೆ ನಿವೇದನೆಯನ್ನು ಸಲ್ಲಿಸಿರುತ್ತೇನೆ.

4. ದಿಃ 17.10.2024 ರಂದು ಪ್ರಕರಣದ ಆರೋಪಿಗೆ ನೋಟೀಸು ಜಾರಿ ಮಾಡಿರುತ್ತೇನೆ. ದಿಃ 05.11.2024 ರಂದು ಚಾಸಾ.8 ರವರು ನೀಡಿದ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ

ಆರೋಪಿಯ ವಿರುದ್ಧ ಆರೋಪ ಸಾಭೀತಾಗಿದ್ದರಿಂದ ದೋಷಾರೋಪಣ ಪತ್ರವನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

5. ನಿ.ಪಿ.2 ಸ್ಥಳ ಮತ್ತು ಅಮಾನತ್ತು ಮಹಜರ್ ನಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿ.ಪಿ.2(ಸಿ) ಎಂದು, ನಿ.ಪಿ.3 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ಚಾಸಾ.8 ರವರು ನೀಡಿದ ನಿ.ಪಿ.7 ವರದಿಯಲ್ಲಿ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿ.ಪಿ.7(ಬಿ) ಎಂದು ಗುರುತಿಸಲಾಯಿತು. ಎನ್.ಸಿ ಪ್ರಕರಣದಲ್ಲಿ ತನಿಖೆಯನ್ನು ಮಾಡಲು ಅನುಮತಿ ನೀಡುವಂತೆ ನ್ಯಾಯಾಲಯಕ್ಕೆ ಸಲ್ಲಿಸಿದ ನಿವೇದನೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.8 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟೀಸನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.9 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಚಾಸಾ.1 ರವರು ಬರೆದುಕೊಟ್ಟ indemnity bond ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.10 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.10(ಎ) ಎಂದು ಗುರುತಿಸಲಾಯಿತು. ಆರ್.ಟಿ.ಒ ಇಲಾಖೆಯವರಿಗೆ ಸಲ್ಲಿಸಿದ ನಿವೇದನೆಯನ್ನು ನಿ.ಪಿ.11 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.11(ಎ) ಎಂದು ಗುರುತಿಸಲಾಯಿತು. 2 ದೃಢೀಕರಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.12 ಮತ್ತು 13 ಎಂದು ಸಾಕ್ಷಿಯ ಸಹಿಗಳನ್ನು ನಿ.ಪಿ.12(ಎ) ಮತ್ತು ನಿ.ಪಿ.13(ಎ) ಎಂದು ಗುರುತಿಸಲಾಯಿತು. ಸಿ.ಡಿ. ಯನ್ನು ನಿ.ಪಿ.14 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು.ಮಾ.1 ಮತ್ತು 2 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮು.ಮಾ.2 ರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ಮು.ಮಾ.2(ಎ) ಎಂದು ಗುರುತಿಸಲಾಯಿತು. ಮು.ಮಾ.1 ಗಾಜನ್ನು ತುಂಬಿದ ಚೀಲವನ್ನು ಮು.ಮಾ.3 ಎಂದು, ಮು.ಮಾ3 ರ ಚೀಲದ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಇರುವ ಸಹಿಯನ್ನು ಮು.ಮಾ.3(ಎ) ಎಂದು ಗುರುತಿಸಲಾಯಿತು. ವಾಹನವನ್ನು ಮತ್ತು ಆರೋಪಿಯನ್ನು

ನೋಡಿದರೆ ಗುರುತಿಸಬಲ್ಲೆ. (ಆರೋಪಿಯನ್ನು ಗುರುತಿಸುವಲ್ಲಿ ತಮ್ಮ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ಆರೋಪಿಯ ಗೈರು ಹಾಜರಿಯ ವಿನಾಯಿತಿ ಅರ್ಜಿ ಸಲ್ಲಿಸಿರುತ್ತಾರೆ.)

ಪಾಟೀ ಸವಾಲು ಶ್ರೀಮತಿ ಬಿ.ಜಿ.ಎನ್ ವಕೀಲರಿಂದ – ಆರೋಪಿ ಪರವಾಗಿ

6. ಚಾಸಾ.1 ವಿನೋದ್ ರವರು ನನಗೆ ಮೊದಲಿನಿಂದಲು ಪರಿಚಯ ಇದೆ ಸರಿ. ಚಾಸಾ.1 ಸಮಾಜದ ಕೆಲವೊಂದು ಪಕ್ಷಗಳಲ್ಲಿ ಗುರುತಿಸಿಕೊಂಡ ವ್ಯಕ್ತಿ ಎಂದರೆ ಸರಿ. ದಿಃ 08.10.2024 ರಂದು ಚಾಸಾ.12 ಠಾಣಾ ಎಸ್.ಹೆಚ್.ಓ ಆಗಿದ್ದರು. ದಿಃ 08.10.2024 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಠಾಣೆಗೆ ದೂರವಾಣಿ ಕರೆ ಬಂದಿಲ್ಲ. ಪಂಚರಿಗೆ ನೀಡಿದ ನೋಟೀಸಿನಲ್ಲಿ ನೋಟೀಸು ನೀಡಿದ ಸ್ಥಳವನ್ನು ನಮೂದು ಮಾಡಿದ್ದೇನೆ. ಸ್ಥಳ ಮಹಜರ್ ಗೆ ನಾನು, ಚಾಸಾ.9 ಮತ್ತು 10 ಹೋಗಿದ್ದೆವು. ಪೊಲೀಸ್ ಠಾಣೆಯಿಂದ ಸ್ಥಳ ಮಹಜರ್ ಗೆ ಹೋದ ಸ್ಥಳ 10 ಕಿ.ಮೀ ಅಂತರದಲ್ಲಿ ಇದೆ. ಠಾಣೆಯಿಂದ ಸ್ಥಳಕ್ಕೆ ಹೋಗಲು 10 ರಿಂದ 15 ನಿಮಿಷ ಆಗುತ್ತದೆ. ಪಂಚರಿಗೆ ನೀಡಿದ ನೋಟೀಸನ್ನು ಠಾಣೆಯಿಂದಲೇ ತಯಾರಿಸಿಕೊಂಡು ಹೋಗಿದ್ದೆವು ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ಚಾಸಾ.1 ರವರು ಸ್ಥಳದಲ್ಲಿ ಹಾಜರಿದ್ದರು.

7. ನಾವು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಕಾರು ಇತ್ತು ಎಂದರೆ ಸರಿಯಲ್ಲ. ಸ್ಥಳ ಮಹಜರ್ ಮಾಡುವ ಸಮಯದಲ್ಲಿ ಕಾರಿನ ಗಾಜು ಹೊಡೆದು ಹೋಗಿತ್ತು ಎಂದರೆ ಸಾಕ್ಷಿ ಕಾರಿನ ಗಾಜು ಹೊಡೆದು ಹೋಗಿರಲಿಲ್ಲ ಎಂದು ನುಡಿಯುತ್ತಾರೆ. ಕಾರಿನ ಗಾಜು ಹೊಡೆದು ಹೋಗಿರಲಿಲ್ಲ ಎಂದು ನಾನು ಮಹಜರ್ ನಲ್ಲಿ ಬರೆದಿದ್ದೇನೆ ಎಂದರೆ ಸರಿ. ಪಕ್ಕದಲ್ಲಿ ಇದ್ದ ಗಾಜು ಸದರಿ ಕಾರಿನ ಗಾಜು ಎಂಬ ಬಗ್ಗೆ ದಾಖಲೆಯನ್ನು ಚಾಸಾ.1 ರವರು ನೀಡಲಿಲ್ಲ. ದಿಃ 09.10.2024 ರಂದು ಕಾರಿನ ಗಾಜು ಹೊಡೆದು ಹೋಗಿದೆ ಎಂದು ಚಾಸಾ.1 ರವರು ದೂರನ್ನು ನೀಡಿದ್ದರು ಎಂದರೆ ಸರಿ. ತಡವಾಗಿ ದೂರನ್ನು ನೀಡಿದ ಕಾರಣವನ್ನು ಮಹಜರ್ ನಲ್ಲಿ ನಮೂದಿಸಿಲ್ಲ. ಮಹಜರ್ ಗೆ ಹೋದ ಸಮಯದಲ್ಲಿ ವಿಪರೀತ ಮಳೆ ಗಾಳಿ ಇತ್ತು ಎಂದರೆ ಸರಿ. ನಿ.ಪಿ.3 ಛಾಯಚಿತ್ರದಲ್ಲಿ ನಾನು ಒಬ್ಬನೇ ಇರುವುದು

ಕಂಡು ಬರುತ್ತದೆ ಎಂದರೆ ಸರಿ. ನನ್ನನ್ನು ಹೊರತುಪಡಿಸಿ ನಿ.ಪಿ.3 ಛಾಯಚಿತ್ರದಲ್ಲಿ ನಮ್ಮ ಠಾಣೆಯ ಇತರೆ ಸಿಬ್ಬಂಧಿಗಳು ಕಂಡು ಬರುವುದಿಲ್ಲ ಎಂದರೆ ಸರಿ.

8. ನ್ಯಾಯಾಲಯದ ಮುಂದೆ ಇರುವ ಮು.ಮಾ.2 ಕಲ್ಲನ್ನು ನಾನು ಆ ದಿನ ನೋಡಲಿಲ್ಲ, ಅದು ಕಾಡು ಜಾತಿಯ ಕಲ್ಲು ಆಗಿತ್ತು ಎಂದರೆ ಸಾಕ್ಷಿ ಮು.ಮಾ.2 ಕಲ್ಲನೇ ಆ ದಿನ ನಾನು ನೋಡಿದ್ದೆ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ನಮೂದಿಸಿರುವ ಕಾರಿನ ಗಾಜಿನ ಬೆಲೆ ರೂ.4,700-00 ಎಂಬ ಬಗ್ಗೆ ದಾಖಲೆಯನ್ನು ಚಾಸಾ.1 ರವರಿಂದ ಪಡೆಯಲಿಲ್ಲ. ಆ ಕಾರಿನ ಗಾಜಿನ ಬೆಲೆಯ ದಾಖಲೆಯನ್ನು ಪಡೆದುಕೊಳ್ಳಲು ನನಗೆ ಆ ದಿನ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಕಾರಿನ ಗಾಜನ್ನು ಬದಲಾವಣೆ ಮಾಡಿಕೊಂಡ ಬಗ್ಗೆ ಚಾಸಾ.1 ರವರ ಮುಂದುವರೆದ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಮಹಜರ್ ನಲ್ಲಿ ಆ ಬಗ್ಗೆ ಹೇಳಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ಮುಂದುವರೆದ ಹೇಳಿಕೆಯ ವಿಚಾರವನ್ನು ನಮೂದಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ಮಹಜರ್ ನಲ್ಲಿ ಬರೆದಿರುವ ಚಕ್ಕುಬಂದಿಯನ್ನು ಹೇಳಲು ಆಗುವುದಿಲ್ಲ. ಮಹಜರ್ ನಲ್ಲಿ ಕಾಣಿಸಿರುವ ರಸ್ತೆಗಳು ಎಲ್ಲಿಗೆ ಹೋಗುತ್ತವೆ ಎಂಬ ಬಗ್ಗೆ ನಿ.ಪಿ.3 ಛಾಯಚಿತ್ರದಲ್ಲಿ ಯಾವುದೇ ನಾಮಫಲಕಗಳು ಕಂಡು ಬರುವುದಿಲ್ಲ ಎಂದರೆ ಸರಿ. ಹೊಡೆದು ಹೋದ ಕಾರಿನ ಗಾಜಿನ ಬೆಲೆ ಚಾಸಾ.1 ರವರು ತಿಳಿಸುವವರೆಗೂ ನನಗೆ ತಿಳಿದಿರಲಿಲ್ಲ ಎಂದರೆ ಸಾಕ್ಷಿ ಆರ್ ಟಿ ಒ ರವರು ಆ ಬೆಲೆಯನ್ನು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

9. ಹೊಡದು ಹೋದ ಗಾಜನ್ನು ಚಾಸಾ.1 ರವರು ಯಾವ ದಿನಾಂಕದಂದು ಬದಲಾಯಿಸಿಕೊಂಡರು ಎಂದು ಮಹಜರ್ ನಲ್ಲಿ ಬರೆದಿಲ್ಲ ಎಂದರೆ ಸರಿ. ದಿಃ 08.10.2024, 09.10.2024 ರ ವಾರಗಳನ್ನು ತುಂಬಾ ಮಳೆ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಮಹಜರ್ ನಲ್ಲಿ ಸೀಬೆಮರವನ್ನು ಕಾಣಿಸಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮಳೆ ಬಂದಾಗ ಸೀಬೆ ಗಿಡದಿಂದ ಕಾಯಿಗಳು ಬಿದ್ದರೆ ಕಾರಿನ ಗಾಜು ಅಥವಾ ಯಾವುದೇ ವಸ್ತು ಇದ್ದರೆ ಜಖಂ ಆಗುತ್ತದೆ

ಎಂದರೆ ಸರಿಯಲ್ಲ. ಮಹಜರ್ ಅನ್ನು ಠಾಣೆಯಲ್ಲಿಯೇ ಬನಾವಟ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರ್.ಟಿ.ಓ ಇಲಾಖೆಯವರಿಗೆ ಮನವಿಯನ್ನು ಸಲ್ಲಿಸಿ ಕಾರಿನ ಹೊಡೆದು ಹೋದ ಗಾಜಿನ ಮೌಲ್ಯದ ವರದಿಯನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರನ್ನು ಎಷ್ಟು ದಿನಗಳ ವರೆಗೆ ಠಾಣೆಯಲ್ಲಿ ನಿಲ್ಲಿಸಿಕೊಂಡಿದ್ದೆ ಎಂದು ನೆನಪಿಲ್ಲ. ಮಹಜರ್ ಅನ್ನು 1 ಗಂಟೆಯ ವರೆಗೆ ತಯಾರಿಸಿದ್ದೆ. ನಿ.ಪಿ.4 ಛಾಯಚಿತ್ರವನ್ನು ದೋಷಾರೋಪಣ ಪಟ್ಟಿಯೊಂದಿಗೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿ. ನಿ.ಪಿ.4 ಛಾಯಚಿತ್ರವನ್ನು ಚಾಸಾ.9 ರವರು ತೆಗೆದಿದ್ದರು.

10. ಪಂಚರಿಗೆ ನೋಟೀಸು ನೀಡಿಲ್ಲ, ಸ್ಥಳಕ್ಕೆ ಹೋಗಿಲ್ಲ, ಮಹಜರ್ ಮಾಡಿ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುದ್ದೆ ಮಾಲಿಗೂ ಆರೋಪಿಗೂ ಒಂದಕ್ಕೊಂದು ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಓ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ